# 11. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ–ಕಲ್ಕುರ್ಚಿ–ಶಿವಮೊಗ್ಗ(ತಾ)






**"ಎಳೆಯ ತರು ದಿನವೂ ಹೊಸ ತಳಿರು ತಳೆವಂತೆ**
**ಎಳೆನೀರು ಚಿಲುಮೆಯಲಿ ನಿಲದುಕ್ಕುವಂತೆ**
**ಎಳೆ ಮಕ್ಕಳೊಳು ತಿಳಿವು ಮೊಳೆತು ಬೆಳೆವುದು ನೋಡಾ**
**ಎಳೆಯೊಳಗದೊಂದು ಸೊಗ" ॥ ಮಂಕುತಿಮ್ಮ॥**

ಮಗುವಿನಲ್ಲಿ ಅನೇಕ ಸುಪ್ತ ಶಕ್ತಿಗಳು ಅಂತರ್ಗತವಾಗಿರುತ್ತವೆ. ಮಕ್ಕಳಿಗೆ ಪ್ರಾರಂಭದಲ್ಲಿಯೇ ನೀಡುವ ಶಿಕ್ಷಣ ಅವರಲ್ಲಿ ಸಂಪೂರ್ಣ ವ್ಯಕ್ತಿತ್ವ, ನಾಗರಿಕ ಪ್ರಜ್ಞೆ, ರಾಷ್ಟ್ರ ಪ್ರೇಮ, ಸೇವಾ ಮನೋಭಾವ ಬೆಳೆಸಿ ಅವರ ಶಾರೀರಿಕ, ಮಾನಸಿಕ ಬೌದ್ಧಿಕ, ಭಾವನಾತ್ಮಕ , ಆಧ್ಯಾತ್ಮಿಕ ಹಾಗೂ ನೈತಿಕ ಬೆಳವಣಿಗೆಗೆ ಸಹಾಯಕವಾಗುತ್ತದೆ. ಮಕ್ಕಳಲ್ಲಿ ಅಡಗಿರುವ ಸುಪ್ತ ಶಕ್ತಿಗಳನ್ನು ಹೊರತರುವ ಮಾರ್ಗದಲ್ಲಿ **" ನಲಿ–ಕಲಿ ಬೋಧನಾ ಪದ್ಧತಿಯು"** ಯಶಸ್ಸನ್ನು ಕಂಡಿದೆ.

ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಗಾಗಿ ನಡೆದಿರುವ ಹೊಸ ಪ್ರಯೋಗಗಳಲ್ಲಿ ನಲಿ–ಕಲಿ ವಿಧಾನವೂ ಒಂದು. ಈ ಪದ್ಧತಿಯು ವಿಶೇಷವಾಗಿ ಬಹುವರ್ಗ ಹಾಗೂ ಬಹುಹಂತದ ಕಲಿಕಾ ಸನ್ನಿವೇಶದ ನಿರ್ವಹಣೆಯ ಸವಾಲಿಗೆ ಕಾರಣವಾದ ಅದೇ ಅಂಶಗಳನ್ನು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಸಾಧನವನ್ನಾಗಿ ಪರಿವರ್ತಿಸಿಕೊಂಡಿದೆ.

ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಸವಾಲನ್ನು ಸಾಧನವನ್ನಾಗಿ ಪರಿವರ್ತಿಸಿಕೊಳ್ಳುವ ಜೊತೆಗೆ ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ಗುಣಾತ್ಮಕ ಕಲಿಕೆಯನ್ನು ಉಂಟುಮಾಡಲು ಅಗತ್ಯವಿರುವ ಕಲಿಕಾ ಬೋಧನಾ ಪ್ರಕ್ರಿಯೆಗೆ ಪೂರಕವಾದ ಸಾಧನೋಪಕರಣಗಳನ್ನು ನಮ್ಮ ನಲಿ–ಕಲಿ ವಿಧಾನ ಒಳಗೊಂಡಿದೆ.

**" ಸಮೃದ್ಧ ನಾಳೆಗಳಿಗಾಗಿ ನಾವೆಲ್ಲರೂ ನಮ್ಮ ಕಾರ್ಯಗಳನ್ನು ಬದ್ಧತೆ & ಶ್ರದ್ದೆಯಿಂದ ಮಾಡೋಣ"**

ಈ ಮಾತು ಪ್ರಸ್ತುತ ದಿನಗಳಲ್ಲಿ ನಿಜವಾಗಿದೆ. ನಮ್ಮ ಶಾಲೆಗಳಲ್ಲಿ ನಲಿ–ಕಲಿ ತರಗತಿ ಕೋಣೆಗಳು ವಸ್ತು ಪ್ರದರ್ಶನಾಲಯವಾಗಿ, ಗ್ರಂಥಾಲಯವಾಗಿ, ಕ್ರೀಡಾಕೋಣೆಯಾಗಿ, ಚಟುವಟಿಕಾ ಖಜಾನೆಯಾಗಿ, ಸಾಂಸ್ಕೃತಿಕ ವೇದಿಕೆಯಾಗಿ, ಚೆಂದದ ಚಪ್ಪರದ ನೆರಳು ನೀಡಿ, ಕಾರ್ಡುಗಳೇ ಗೋಡೆಗಳಾಗಿ, ಉಳಿದ ಗೋಡೆ ವಾಲ್ ಸ್ಲೇಟುಗಳಾಗಿ, ಬಣ್ಣ ಬಣ್ಣದ ತಟ್ಟೆಗಳಿಂದಾಗಿ ಕಲಿಕಾ ಸಾಮಗ್ರಿಗಳ ಅಂಗಡಿಗಳಿಂದಾಗಿ ಯಾವಾಗಲೂ ಚಟುವಟಿಕೆಯಿಂದಿರುವ ನಲಿ–ಕಲಿ ಚಿಣ್ಣರಿಂದಾಗಿ ಇಂದು ನಮಗೆ ನಲಿ–ಕಲಿ ಹೆಮ್ಮೆಯ ವಿಷಯವಾಗಿದೆ.

ನಮ್ಮದು ಕಿರಿಯ ಪ್ರಾಥಮಿಕ ಶಾಲೆ, ಪ್ರಕೃತಿಯ ಚೆಂದದ ಮಡಿಲು ಮಲೆನಾಡಿನ ತೊಟ್ಟಿಲಲ್ಲಿ ನಮ್ಮ ಶಾಲೆ ಹಚ್ಚ ಹಸುರಿನ ನಡುವೆ ಕಂಗೊಳಿಸಿದೆ. ಶಾಲೆಯ ಸ್ಥಳ ಶಿವಮೊಗ್ಗ ತಾಲ್ಲೂಕಿಗೆ ಸೇರಿದರೆ ಇಲ್ಲಿಯ ನಿವಾಸಿಗಳು ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದವರಾಗಿರುತ್ತಾರೆ. ನಮ್ಮ ಶಾಲೆ 1965ರಲ್ಲಿ ಜನಿಸಿದೆ. ಚಿಕ್ಕದಾದ ನಮ್ಮ ಶಾಲೆ ಚೆಂದವಾದ ವಾತಾವರಣ ಹೊಂದಿದೆ.

## 1. " ಸುಂದರ– ಭೌತಿಕ ಪರಿಸರ"

- ಮುಂಭಾಗದಲ್ಲಿ ವಿಶಾಲವಾದ ಮೈದಾನ & ಕೈತೋಟವಿದೆ
- ಓದುವ/ಸಹ ಪಠ್ಯ ಚಟುವಟಿಕೆಗಳ ಉದ್ದೇಶಕ್ಕಾಗಿ ನಿರ್ಮಿಸಿದ ಕುಟೀರ ಇದೆ
- ಕುಡಿಯವ ನೀರಿನ ಸೌಲಭ್ಯ, ವಿಶಾಲವಾದ ಹಿಂಭಾಗದ ಮೈದಾನ
- ಶಾಲೆಯ ಸುತ್ತ ಮುತ್ತ ಅನೇಕ ಔಷಧಿ ಸಸ್ಯಗಳು ಮತ್ತು ಅನೇಕ ಮರಗಳಿವೆ.
- ತರಗತಿ ಕೋಣೆಗಳೆರಡೂ ಟೈಲ್ಸ್ ಹೊಂದಿವೆ. ಕಾರಿಡಾರ್ ಕೂಡ ಸುಂದರವಾಗಿದೆ.
- ಶಾಲೆಯ ಮುಂಭಾಗದಲ್ಲಿ ಸಿಮೆಂಟ್ ದಾರಿ ಪೂರ್ಣಗೊಂಡಿದೆ.

ನಮ್ಮ ಶಾಲೆಯಲ್ಲಿ ನಾವು ಇಬ್ಬರು ಶಿಕ್ಷಕಿಯರು ಕರ್ತವ್ಯ ನಿರ್ವಹಿಸುತ್ತಿದ್ದು, ಇಬ್ಬರಿಗೂ ನಲಿ–ಕಲಿ ತರಬೇತಿ ಒದಗಿದೆ. ಶ್ರೀಮತಿ ರೇಖಾ ಎಂ.ಹೆಚ್ ಆದ ನಾನು 1 ರಿಂದ 5ನೇ ತರಗತಿಗೆ ಕನ್ನಡ ಮತ್ತು ಗಣಿತ ಬೋಧಿಸುತ್ತಿದ್ದು, ಇನ್ನೊರ್ವ ಶಿಕ್ಷಕ ಮಿತ್ರರಾದ ಶೀಮತಿ ಮೇದಿನಿ ಕೆ.ಎಸ್ ಇಂಗ್ಲೀಷ್ ಮತ್ತು ಪರಿಸರ ಅಧ್ಯಯನ ಬೋಧಿಸುತ್ತಿದ್ದಾರೆ. ನಲಿ–ಕಲಿಯಲ್ಲಿ ನಾವಿಬ್ಬರೂ ನಮ್ಮದೇ ಕನಸಿಗೆ ಅನುಗುಣವಾಗಿ ತರಗತಿ ಕೋಣೆಯನ್ನು ಯೋಜಿಸಿಕೊಂಡಿದ್ದೇವೆ. ನಾವು ವಿಷಯವಾರು ಕಲಿಕಾ ಸಾಮಾಗ್ರಿಗಳನ್ನು ತಯಾರಿಸಿಕೊಂಡಿದ್ದೂ ಪಾಠಕ್ಕೆ ಪೂರಕವಾಗಿ ಬಳಸಿಕೊಳ್ಳುತ್ತಿದ್ದೇವೆ.

## " ಪರಿಪೂರ್ಣ ನಲಿ–ಕಲಿಯತ್ತ ನಮ್ಮ ಚಿತ್ತ"

ನಮ್ಮ ಕಲ್ಲುರ್ಚಿ ಶಾಲೆ 2019–20ರ ಶೈಕ್ಷಣಿಕ ಸಾಲಿನ ಉತ್ತಮ ನಲಿ–ಕಲಿ ಶಾಲೆ ಎಂಬ ಬಿರುದಿಗೆ ಭಾಜನವಾಗಿದೆ. ಇದು ಹೆಮ್ಮೆಯ ವಿಷಯ. ನಮ್ಮ ಶಾಲೆಯಲ್ಲಿನ ನಲಿ–ಕಲಿ ಪ್ರಕ್ರಿಯೆಯನ್ನು ಹಂತ ಹಂತವಾಗಿ ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ನಿಮಗೆಲ್ಲಾ ತಿಳಿದಿರುವಂತೆ ನಲಿ–ಕಲಿ ತನ್ನದೇ ಆದ ವಿಶೇಷ ಕಲಿಕಾ ವಿಧಾನಗಳನ್ನು ಕಲಿಕಾ ವಿಶೇಷತೆ ಮತ್ತು ಕಲಿಕಾ ಸಾಮಾಗ್ರಿಗಳನ್ನು ಹೊಂದಿದೆ.

*. ಕಲಿಕಾ ಚಪ್ಪರ
* ವಾಲ್ ಸ್ಲೇಟುಗಳು
* ಗುಂಪು ತಟ್ಟೆಗಳು
* ಹವಾಮಾನ ನಕ್ಷೆ
* ಪ್ರಗತಿ ನೋಟ
* ಅಭ್ಯಾಸ ಪುಸ್ತಕ
* ಯೋಜನೆಗಳು
* ಪಪ್ಪೆಟ್ ಷೋ
* ವಿಷಯವಾರು ಕಲಿಕಾ ಸಾಮಾಗ್ರಿಗಳು
* ವಿಶೇಷ ಕಲಿಕಾ ಚಟುವಟಿಕೆಗಳು
* ಕ್ರಾಫ್ಟ್ ಗಳು

**ಕಲಿಕಾ ಚಪ್ಪರ:–** ಕಲಿಕಾ ಚಪ್ಪರ ಹೆಸರೇ ಸೂಚಿಸುವಂತೆ ಮಕ್ಕಳು ತಮ್ಮ ನಲಿ–ಕಲಿ ಹೆಜ್ಜೆಯಲ್ಲಿ ಸಾಧಿಸುವ ಕ್ರಾಫ್ಟ್ ಗಳು ಮತ್ತು ಕಲಿಕೆಯ ಗುರುತುಗಳಾಗಿವೆ. ನಮ್ಮ ಶಾಲೆಯಲ್ಲಿ ಕಲಿಕಾ ಚಪ್ಪರವು ಈ ರೀತಿ ವಿಭಿನ್ನವಾಗಿದ್ದು, ತರಗತಿ ಆಕರ್ಷಣೆಗೆ ಕೇಂದ್ರ ಬಿಂದುವಾಗಿದೆ. ಕಲಿಕಾ ಚಪ್ಪರದಲ್ಲಿ ನಾವು ಪ್ರತಿ ಮಗುವಿನ ಕ್ರಾಫ್ಟ ನ್ನು ವಿಷಯವಾರು ತೂಗು ಹಾಕಿದ್ದೇವೆ. ಕಲಿಕಾ ಚಪ್ಪರ ಎಲ್ಲಾ ಮಕ್ಕಳ ಪ್ರತಿಭೆಯನ್ನು ಶೋಭಿಸುವ ಮತ್ತು ಪ್ರದರ್ಶಿಸುವ ತೂಗು ವೇದಿಕೆಯಾಗಿದೆ.

**ವಾಲ್ ಸ್ಲೇಟುಗಳು:–** ನಮ್ಮ ಶಾಲೆಯಲ್ಲಿ ಸರಳ ಮತ್ತು ಸುಂದರವಾದ ಈ ರೀತಿಯ ವಾಲ್ ಸ್ಲೇಟುಗಳನ್ನು ರಚಿಸಿದ್ದು, ಇವು 2 & 4 ಗೆರೆಯನ್ನು ಹೊಂದಿವೆ. ಮಕ್ಕಳು ಸಂಪೂರ್ಣ ಪ್ರಮಾಣದಲ್ಲಿ ವಾಲ್ ಸ್ಲೇಟುಗಳನ್ನು ಬಳಸುತ್ತಿದು, ಕಲಿಕೆಯ ಪುನರ್ವಿಲನ ಮತ್ತು ದೃಢೀಕರಣಕ್ಕೆ ಸಹಾಯವಾಗಿದೆ. 1,2 & 3ನೇ ಏಣಿಯ ಮಕ್ಕಳನ್ನು ಮಿಶ್ರವಾಗಿ ಕೂರಿಸಲಾಗಿದೆ.

**ಗುಂಪು ತಟ್ಟೆಗಳು:–** ನಮ್ಮ ನಲಿ–ಕಲಿ ತರಗತಿ ಕೋಣೆಗೆ ಈ ವರ್ಷದಲ್ಲಿ ಟೈಲ್ಸ್ ಹಾಕಲಾಗಿದೆ. ನಾವು ಮೂರು ಏಣಿಗಳು ಬಿಂಬಿಸುವ ಮೂರು ಬಣ್ಣಗಳಿಂದ (ನೀಲಿ, ಕೆಂಪು, ಹಸಿರು) ಕೂಡಿದ ಸುಂದರ ತಟ್ಟೆಗಳನ್ನು ಹಾಕಿದ್ದೇವೆ. ಕಲಿಕಾ ತಟ್ಟೆಗಳಲ್ಲಿ ಯಾವ ಚಟುವಟಿಕೆ ಯಾವ ಗುಂಪಿನಲ್ಲಿ ಯಾರ ಮಾರ್ಗದರ್ಶನದಲ್ಲಿ ಹಾಗೂ ಎಷ್ಟು ಪ್ರಮಾಣದ ಮಾರ್ಗದರ್ಶನ ನಡೆಯಬೇಕು ಎಂದು ನಿರ್ಧರಿಸಿದೆ. ನಮ್ಮ ಶಾಲೆಯ ಮಕ್ಕಳು ಗುಂಪು ತಟ್ಟೆಗಳಲ್ಲಿ ಯಶಸ್ವಿಯಾಗಿ ಸಾಗುತ್ತಿದ್ದಾರೆ.

**ಹವಾಮಾನ ನಕ್ಷೆ :-** ಹವಾಮಾನ ನಕ್ಷೆಯು ಮಗುವು ವಾಯುಗುಣವನ್ನು ಅರಿಯಲು ಮತ್ತು ವಾತಾವರಣದಲ್ಲಿನ ದೈನಂದಿನ ಬದಲಾವಣೆಗಳನ್ನು ಗುರುತಿಸಿ ಗಮನಿಸಲು ಸಹಾಯಕವಾಗುವ ಅಂಶವಾಗಿದೆ. ಇಲಾಖೆಯು ಒದಗಿಸಿದ ಹವಾಮಾನ ನಕ್ಷೆಯ ಜೊತೆಗೆ **'ಇಂದಿನ ಹವಾಮಾನವೆಂಬ'** ಚಿತ್ರಸೂಚಿಯನ್ನು ರಚಿಸಿಕೊಂಡಿದ್ದೆವೆ.

**ಪ್ರಗತಿ ನೋಟಗಳು ಮತ್ತು ಅಭ್ಯಾಸ ಪುಸ್ತಕಗಳು:-** ಕಲಿಕೆಯ ವೇಗಕ್ಕೆ ಅನುಗುಣವಾಗಿ ಮಗುವನ್ನು ಚಟುವಟಿಕೆಯಲ್ಲಿ ತೊಡಗಿಸಬೇಕಾಗುತ್ತದೆ. ಆದ್ದರಿಂದ ಮಗುವಿನ ಸಾಧನೆಯನ್ನು ಚಟುವಟಿಕೆಯ ಕೊನೆಯಲ್ಲಿ ಗುರ್ತಿಸಬೇಕಾಗಿದೆ. ಅಂತೆಯೇ ಶೈಕ್ಷಣಿಕ ವರ್ಷದ ಕೊನೆಯಲ್ಲಿ ವಿದ್ಯಾರ್ಥಿಯ ಸಾಧನೆಯನ್ನು ಪೋಷಿಸಲು ದಾಖಲೆಯ ಅಗತ್ಯವಿದೆ. ಇದಕ್ಕಾಗಿ ಚಿತ್ರ ಸಹಿತ ಕಲಿಕಾ ಚಟುವಟಿಕೆಗಳನ್ನು ಮೆಟ್ಟಿಲುವಾರು ಮೈಲಿಗಲ್ಲುವಾರು ಪ್ರಗತಿನೋಟದಲ್ಲಿ ಜೋಡಿಸಿ ನೀಡಲಾಗಿದೆ.

**ಪಪೆಟ್‌ಗಳು & ಯೋಜನೆಗಳು:-** ಪಪ್ಪೆಟ್ ಶೋ ಚಟುವಟಿಕೆಯಿಂದ ಮಕ್ಕಳಲ್ಲಿ ಸಂವಹನ ಕೌಶಲ ಉತ್ತಮ ಪಡಿಸಲು ಹಾಗೂ ಸೃಜನ ಶೀಲತೆ ಹೆಚ್ಚಿಸಲು ಸಾಧ್ಯ. ನಾವು ಪರಿಸರ ಅಧ್ಯಯನದಲ್ಲಿ ಈ ರೀತಿಯ ಯೋಜನೆಗಳನ್ನು ಮಾಡಿದ್ದೇವೆ. ವಸತಿ, ಆಹಾರ ಧಾನ್ಯಗಳು, ಪ್ರಾಣಿ ಸಂಗ್ರಹಾಲಯ ಜಲಚರ ಜೀವಿಗಳು, ಕಲಿಕಾ ಸಾಮಾಗ್ರಿಗಳನ್ನು & ವಿಷಯವಾರು, ಮೆಟ್ಟಿಲುವಾರು, ಚಟುವಟಿಕೆವಾರು ಜೋಡಿಸಿಟ್ಟುಕೊಳ್ಳಲಾಗಿದೆ. ಇದಲ್ಲದೇ ನಲಿ-ಕಲಿ ತೋರಣ, ಚಿಪ್ಪಿನ ಮೇಲೆ/ಮಡಕೆ ಮೇಲೆ ಪೇಂಟ್, ವಿವಿಧ ಮಾದರಿ ಹೂವುಗಳು ಕ್ರಾಫ್ಟ್‌ಗಳನ್ನು No bag day ಅಡಿಯಲ್ಲಿ ಮಾಡಿಸಿದ್ದೇವೆ. ಒಟ್ಟಾರೆ ನಮ್ಮ ಹೊಸ ಹೊಸ ಆಲೋಚನೆಗಳನ್ನು ಬಿತ್ತಿ ಮಕ್ಕಳ ಮೂಲಕ ವಿವಿಧ ರೀತಿಯ ಕಲಿಕೆ ಪೈರನ್ನು ಬೆಳೆಯಲು ನಾವಿಬ್ಬರೂ ಪ್ರಯತ್ನ ಪಡುತ್ತಿದ್ದೇವೆ.

ನಮ್ಮ ಶಾಲೆಯಲ್ಲಿ ನಾವು ಕಾರ್ಯವನ್ನು ಹೊಸದಾಗಿ ಯೋಜಿಸುವಾಗ ಅಥವಾ ನವೀಕರಣದತ್ತ ಕೊಂಡೊಯ್ಯುವಾಗ ಎಸ್.ಡಿ.ಎಂ.ಸಿ ಮತ್ತು ಊರಿನ ನಾಗರೀಕರು ಬಹಳಷ್ಟು ಪ್ರೋತ್ಸಾಹ ನೀಡುತ್ತಾರೆ. ನಲಿ-ಕಲಿ ನಿರ್ವಹಣೆ ಸಾಮಾನ್ಯ ವಿಷಯವಲ್ಲ. ಏಕೆಂದರೆ ತಿಳಿದರೂ ತಿಳಿಯುವಷ್ಟು ವಿಷಯ & ಚಟವಟಿಕೆ ವಿಸ್ತಾರ ಈ ವಿಧಾನದಲ್ಲಿದೆ.

ನನ್ನ ವೈಯಕ್ತಿಕ ಅನಿಸಿಕೆಯೊಂದನ್ನು ಈ ಸಂದರ್ಭದಲ್ಲಿ ಹಂಚಿಕೊಳ್ಳಲು ಇಷ್ಟ ಪಡುತ್ತೇನೆ. ನಲಿ-ಕಲಿ ಪದ್ಧತಿಯು ಪ್ರಾಥಮಿಕ ಹಂತದಲ್ಲಿ ಯಶಸ್ವಿಯಾಗುತ್ತಿರುವ ಪ್ರತಿಫಲವೇ ಭವಿಷ್ಯದ ಫಲಿತಾಂಶವಾಗಿದೆ. ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ನಮ್ಮ ನಲಿ-ಕಲಿ ಪದ್ಧತಿ ಭದ್ರ ಬುನಾದಿಯಾಗಿದೆ. ಇಲ್ಲಿ ಮಗು ಯಾವ ಸಾಮರ್ಥ್ಯದಿಂದಲೂ ಹೊರಗುಳಿಯುವುದಿಲ್ಲ ಒಂದು ವೇಳೆ ತೀರಾ ಕಲಿಕೆಯಲ್ಲಿ ಹಿಂದುಳಿದ ಮಗುವು ಸಾಮರ್ಥ್ಯಗಳನ್ನು ಪೂರೈಸದಿದ್ದರೂ ಹಾಗೂ 3ನೇ ಏಣಿ ಮುಗಿಸುವಷ್ಟರಲ್ಲಿ ಕನಿಷ್ಠ ಕಲಿಕಾ ಮಟ್ಟವನ್ನಂತೂ ಖಂಡಿತಾ ದಾಟುತ್ತದೆ.

ನಲಿ-ಕಲಿಯು ಕೇವಲ ಮಕ್ಕಳ ಅನುಭವಕ್ಕಲ್ಲ. ಸುಗಮಕಾರರು ಕೂಡ ಬಾಹ್ಯ ಪರಿಸರವನ್ನು ಮರೆತು ಮಕ್ಕಳೊಡನೆ ಸಂಪೂರ್ಣ ಬೆರೆಯುವ ಸುವರ್ಣ ರಂಗ ವೇದಿಕೆ ನಮ್ಮ ನಲಿ-ಕಲಿ ಸಜ್ಜಿಕೆ. ಪ್ರಾಥಮಿಕ ಹಂತದಲ್ಲಿ ನಲಿ-ಕಲಿ ವಿಧಾನ ಶಾಶ್ವತವಾಗಿ ಉಳಿದು ಬೇರೂರಲಿ ಎಂಬುದು ನನ್ನ ಆಶಯ, ಹಾಗೆಯೇ ಇಂಗ್ಲೀಷ್ ನಲಿ-ಕಲಿ ಶೀಘ್ರವಾಗಿ ಪ್ರಾರಂಭವಾಗಲಿ ಎಂಬುದು ನಮ್ಮ ಆಶಯವಾಗಿದೆ.

**ಈ ವರ್ಷದ ಮ್ಯಾಕ್ರೋ ಅಧ್ಯಯನ:-**

ನಮ್ಮ ಶಾಲೆಗೆ ದಿ: 21-03-2019ರ ಗುರುವಾರದಂದು ಶ್ರೀ ಸದಾನಂದ ಸಿ.ಆರ್.ಪಿ ಮಂಡಘಟ್ಟ ಇವರು ಆಗಮಿಸಿ ಪ್ರತಿಯೊಂದನ್ನು ವಿಷಯವಾರು ವೀಕ್ಷಿಸಿ ಪರಿಶೀಲಿಸಿದರು. ನಲಿ-ಕಲಿಯು ಉತ್ತಮ ಪ್ರಗತಿಯಲ್ಲಿದೆ ಎಂದು ತಿಳಿಸಿ ಇನ್ನಷ್ಟು ಸಲಹೆಗಳನ್ನು ನೀಡಿ ಬದಲಾವಣೆಗೆ ದಾರಿ ನೀಡಿದರು.

ನಮ್ಮ ಕನಸಿಗೆ & ಪ್ರಯತ್ನಕ್ಕೆ ಪೂರಕವೆಂಬಂತೆ ನಮ್ಮ ಶಾಲೆಯಲ್ಲಿನ ನಲಿ-ಕಲಿ ದಾರಿಯನ್ನು ಗುರ್ತಿಸಿ ಈ ವರ್ಷದ ತಾಲ್ಲೂಕಿನ 3 ಉತ್ತಮ ನಲಿ-ಕಲಿ ಶಾಲೆಗಳಲ್ಲಿ ನಮ್ಮ ಶಾಲೆಯು ಒಂದು ಎಂದು ಹೇಳಲು ಹೆಮ್ಮೆ ಪಡುತ್ತೇವೆ. ಎಲ್ಲಾ ನಲಿ-ಕಲಿ ಅಧಿಕಾರಿ ವರ್ಗ, ಬಿ.ಆರ್.ಪಿ ಬಳಗ, ಸಿ.ಆರ್.ಪಿ ಬಳಗ, ಎಸ್.ಡಿ.ಎಂ.ಸಿ ವೃಂದ ಪೋಷಕರ ಬಳಗಕ್ಕೆ ನಾವು ಇಬ್ಬರೂ ಶಿಕ್ಷಕಿಯರು ಮತ್ತೊಮ್ಮೆ ಧನ್ಯವಾದಗಳನ್ನು ತಿಳಿಸುತ್ತೇವೆ.

**"ಬಳಸಿದಷ್ಟು ಬೆಳೆಯುವ ಸಂಪತ್ತು ಶಿಕ್ಷಣ"**
**ನಲಿ-ಕಲಿ ಬೆಳೆಸೋಣ ಶಾಲೆಗಳನ್ನು ಮೆರೆಸೋಣ**








ವಾಚಕಗಳು ಮತ್ತು
ಕಲಿಕಾ ಸಾಮಗ್ರಿಗಳ
ಜೋಡಣೆ ....


ಗುಂಪು ತಟ್ಟೆಗಳು


ಕನ್ನಡ ಮತ್ತು ಗಣಿತ
ಕಲಿಕಾ ಸಾಮಗ್ರಿಗಳ
ಜೋಡಣೆ
Glps Kalkurchi...

